ಶ್ರೀರಾಮಕೃಷ್ಣರು ನನ್ನೊಡನೆ ಸಂಭಾಷಣೆಗೆ ಪ್ರಾರಂಭಿಸಿದರು. ಅನೇಕ ವಿಷಯಗಳ ಬಗ್ಗೆ ಮಾತನಾಡಿದರು. ಯಾವುದೋ ಆಧ್ಯಾತ್ಮಿಕ ಶಕ್ತಿ ನನ್ನ ದೇಹದಲ್ಲಿ ಕಾಲಿನಿಂದ ತಲೆಯವರೆಗೆ ಮತ್ತು ತಲೆಯಿಂದ ಕಾಲಿನವರೆಗೆ ಸಂಚರಿಸಿದಂತಾಯಿತು. ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರು ಬಾಹ್ಯಪ್ರಜ್ಞೆ ಕಳೆದುಕೊಂಡು ಭಾವಾವಿಷ್ಟರಾದರು. ಆ ಸ್ಥಿತಿಯಲ್ಲಿ ಅವರು ಒಬ್ಬ ಸಣ್ಣ ವಯಸ್ಸಿನ ಭಕ್ತನೊಂದಿಗೆ ಆಟವಾಡುತ್ತಿದ್ದರು. ಅನೇಕ ವರ್ಷಗಳ ಹಿಂದೆ ದುಷ್ಟ ವ್ಯಕ್ತಿಯೊಬ್ಬ ಅವರ ಬಗ್ಗೆ ಆಡಿದ್ದ ಅವಹೇಳನದ ಮಾತುಗಳು ಆಗ ನನಗೆ ನೆನಪಾದುವು. ಆ ಕ್ಷಣದಲ್ಲಿ ಶ್ರೀರಾಮಕೃಷ್ಣರಿದ್ದ ಭಾವಕ್ಕೆ ತಡೆ ಬಂತು. ಅವರ ಭಾವ ಬದಲಾಯಿತು. ನನ್ನ ಕಡೆ ಕೈ ತೋರಿಸಿ, "ನಿನ್ನ ಮನಸ್ಸಿನಲ್ಲಿ ಸ್ವಲ್ಪ ವಕ್ರತೆ ಇದೆ" ಎಂದರು. ನಾನು ಯೋಚಿಸಿದೆ, "ಹೌದು, ಬೇಕಾದಷ್ಟಿದೆ, ಅನೇಕ ವಿಧವಾಗಿ ಇವೆ." ಆದರೆ ಅವರು ಯಾವ ವಿಧವಾದ ವಕ್ರತೆಯ ಬಗ್ಗೆ ಹೇಳುತ್ತಿರುವರು ಎಂಬುದು ನನಗೆ ಗೊತ್ತಾಗಲಿಲ್ಲ. "ಇದರಿಂದ ಹೇಗೆ ನಾನು ಪಾರಾಗಲಿ?" ಎಂದು ಕೇಳಿದೆ. "ವಿಶ್ವಾಸವಿರಲಿ" ಎಂದಷ್ಟೇ ಶ್ರೀರಾಮಕೃಷ್ಣರು ಹೇಳಿದರು.

ಕಾಲ ಉರುಳಿತು. ಒಂದು ದಿನ ನಾನು ಮಧ್ಯಾಹ್ನ ಮೂರು ಗಂಟೆಗೆ ನಾಟಕಮಂದಿರಕ್ಕೆ ಹೋದೆ. ಮೇಜಿನ ಮೇಲೆ ಒಂದು ಚೀಟಿ ಇತ್ತು. ಅದರಲ್ಲಿ, ಶ್ರೀರಾಮಕೃಷ್ಣರು ಕಲ್ಕತ್ತದ ಮಧು ರೇ ರಸ್ತೆಯಲ್ಲಿರುವ ರಾಮಚಂದ್ರ ದತ್ತನ ಮನೆಗೆ ಹೋಗುತ್ತಿರುವರು ಎಂದಿತ್ತು. ಕೂಡಲೇ ಅವರನ್ನು ನೋಡಬೇಕೆಂದು ಬಲವಾದ ಮನಸ್ಸಾಯಿತು. ಹಿಂದೊಮ್ಮೆ, ಅವರು ಹೋಗುತ್ತಿರುವುದನ್ನು ನೋಡಿದಾಗ ಹೀಗೆಯೇ ಉತ್ಕಟ ಇಚ್ಛೆಯಾಗಿತ್ತು. ಹೋಗಲು ಮನ ತವಕಿಸಿತು. ಆದರೆ, ಆಹ್ವಾನವಿಲ್ಲದೆ ಅಪರಿಚಿತರ ಮನೆಗೆ ಹೋಗಬಹುದೆ ಎಂದು ಯೋಚಿಸಿದೆ. ಕಾಣದ ತಂತು ನನ್ನ ಮನಸ್ಸನ್ನು ಸೆಳೆಯುತ್ತಿತ್ತು. ಆದ್ದರಿಂದ ನಾನು ಹೋಗಲೇಬೇಕಾಯಿತು. ಸ್ವಲ್ಪ ದೂರ ಹೋದೆ, ಮತ್ತೆ ನಿಂತೆ. ಮನಸ್ಸಿಗೆ ಬಂತು, "ಇಲ್ಲ, ನಾನು ಹೋಗಲೇಬೇಕು" ಎಂದು. ಅದು ನಿಸ್ಸಹಾಯಕನಾದ ವ್ಯಕ್ತಿಯೊಬ್ಬನನ್ನು ಎಳೆದುಕೊಂಡು ಹೋದಂತಿತ್ತು. ಕೆಲವು ಹೆಜ್ಜೆಗಳು ಹೋದೆ, ಮತ್ತೆ ನಿಂತೆ. ರಾಮಚಂದ್ರ ದತ್ತನ ಮನೆಯ ಸಮೀಪಕ್ಕೆ ಹೋದನಂತರವೂ ನಾನು ಹಿಂಜರಿದೆ. ಮನೆಯ ಗೇಟನ್ನು ಸಮೀಪಿಸಿದಾಗ ಸಂಜೆಯಾಗಿತ್ತು. ರಾಮಚಂದ್ರ ಅಲ್ಲಿ ಕುಳಿತಿದ್ದ. ನನ್ನನ್ನು ಒಳಗೆ ಕರೆದುಕೊಂಡು ಹೋದ. ಅಂಗಳದಲ್ಲಿ ಶ್ರೀರಾಮಕೃಷ್ಣರು ಭಾವೋನ್ಮತ್ತರಾಗಿ ನರ್ತಿಸುತ್ತಿದ್ದರು. ಯಾರೋ ಒಬ್ಬರು, ಮೃದಂಗ ಸಹಕಾರದೊಂದಿಗೆ ಹಾಡುತ್ತಿದ್ದರು. ಭಕ್ತರು ಶ್ರೀರಾಮಕೃಷ್ಣರನ್ನು ಸುತ್ತುವರಿದು ಕುಣಿಯುತ್ತಿದ್ದರು; **"ಗೌರಾಂಗನ ಹೃದಯದಿಂದ ಉಕ್ಕುತ್ತಿರುವ ದಿವ್ಯಪ್ರೇಮದ ಅಲೆಗಳಿಂದ ನಾಡಿಯಾ ಕಂಪಿಸುತ್ತಿದೆ"** ಎಂಬ ಹಾಡನ್ನು ಹಾಡುತ್ತಿದ್ದರು. ಅಂಗಳ ಆನಂದಸಾಗರದಂತೆ ಕಾಣುತ್ತಿತ್ತು. ನನ್ನ ಕಣ್ಣುಗಳು ಕಣ್ಣೀರಿನಿಂದ ತುಂಬಿದುವು. ಶ್ರೀರಾಮಕೃಷ್ಣರು ಇದ್ದಕ್ಕಿದ್ದಂತೆ ಸ್ಥಿರವಾಗಿ ನಿಂತರು. ಅವರು ಸಮಾಧಿಯಲ್ಲಿ ಲೀನರಾಗಿದ್ದರು. ಭಕ್ತರು ಅವರ ಪಾದಧೂಳಿಯನ್ನು ತೆಗೆದುಕೊಳ್ಳಲು ಆರಂಭಿಸಿದರು. ನನಗೂ ಹಾಗೆಯೆ ಮಾಡಬೇಕೆನ್ನಿಸಿತು. ಸಂಕೋಚದಿಂದಾಗಿ ಮಾಡಲಾಗಲಿಲ್ಲ. ನಾನು ಅವರ ಪಾದಧೂಳಿಯನ್ನು ತೆಗೆದುಕೊಂಡರೆ ಇತರರು ಏನು ಹೇಳುವರೊ ಎಂದು ಯೋಚಿಸುತ್ತಿದ್ದೆ. ಈ ಆಲೋಚನೆ ನನ್ನ ಮನಸ್ಸಿಗೆ ಬರುತ್ತಿದ್ದಂತೆ, ಶ್ರೀರಾಮಕೃಷ್ಣರು ಸಮಾಧಿಸ್ಥಿತಿಯಿಂದ ಕೆಳಗಿಳಿದು ಮತ್ತೆ ನರ್ತಿಸಲಾರಂಭಿಸಿದರು. ನರ್ತಿಸುತ್ತ ನನ್ನ ಮುಂದೆ ಸ್ತಬ್ಧರಾಗಿ ನಿಂತು ಸಮಾಧಿಸ್ಥರಾದರು. ಈಗ ನನಗೆ ಯಾವ ಸಂಕೋಚವೂ ಇರಲಿಲ್ಲ. ನಾನು ಅವರ ಪಾದಧೂಳಿಯನ್ನು ತೆಗೆದುಕೊಂಡೆನು.

ಹಾಡುವುದು ನಿಂತ ಮೇಲೆ, ಶ್ರೀರಾಮಕೃಷ್ಣರು ಬೈಠಕ್ ಖಾನೆಯಲ್ಲಿ ಕುಳಿತುಕೊಂಡರು. ನಾನು ಅವರ ಹಿಂದೆ ಹೋದೆ. ಅವರು ನನ್ನೊಡನೆ ಮಾತನಾಡಲು ಪ್ರಾರಂಭಿಸಿದರು. "ನನ್ನಲ್ಲಿರುವ ವಕ್ರತೆ ಹೋಗುವುದೆ?" ಎಂದು ಅವರನ್ನು ನಾನು ಕೇಳಿದೆ. "ಹೌದು, ಹೋಗುವುದು" ಎಂದರು. ಮತ್ತೆ ಅದೇ ಪ್ರಶ್ನೆಯನ್ನು ಕೇಳಿದೆ. ಅವರು ಅದೇ ಉತ್ತರ ಕೊಟ್ಟರು. ಇನ್ನೊಮ್ಮೆ ಅದನ್ನೇ ಕೇಳಿದೆ. ಮತ್ತೆ ಅವರು ಅದೇ ಉತ್ತರವನ್ನು ಕೊಟ್ಟರು. ಆಗ ಅವರ ನಿಷ್ಠಾವಂತ ಭಕ್ತನಾದ ಮನಮೋಹನ ಮಿತ್ರ, "ಇಷ್ಟಕ್ಕೆ ಸಾಕು. ನಿನ್ನ ಪ್ರಶ್ನೆಗೆ ಆಗಲೇ ಅವರು ಉತ್ತರ ಕೊಟ್ಟಿರುವರು. ಏಕೆ ಮತ್ತೆ ಮತ್ತೆ ಅವರಿಗೆ ತೊಂದರೆ ಕೊಡುವೆ?" ಎಂದು ಒರಟಾಗಿ ಹೇಳಿದನು. ಅವನಿಗೆ ಚುರುಕಾದ ಉತ್ತರ ಕೊಡಲು ಅವನ ಕಡೆ ತಿರುಗಿದೆ. ನನ್ನನ್ನು ಟೀಕಿಸುವವರು ನನ್ನ ಮಾತಿನ ಚಾಟಿಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ. ಆದರೆ ನಾನು, "ಮನಮೋಹನ ಹೇಳುವುದು ಸರಿ ಇರಬಹುದು. ಒಮ್ಮೆ ಹೇಳಿದುದನ್ನು ನಂಬದವನು ನೂರು ಬಾರಿ ಹೇಳಿದರೂ ನಂಬಲಾರ" ಎಂದು ಯೋಚಿಸುತ್ತ ನಾಲಗೆಯನ್ನು ಬಿಗಿಹಿಡಿದೆ. ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ ನಾಟಕಶಾಲೆಗೆ ಹಿಂತಿರುಗಿದೆ.

ಒಂದು ರಾತ್ರಿ ಕುಡಿದ ಅಮಲಿನಲ್ಲಿ ಇಬ್ಬರು ಮಿತ್ರರೊಂದಿಗೆ ವೇಶ್ಯೆಯರ ಮನೆಗೆ ಹೋದೆ. ಆದರೆ ಇದ್ದಕ್ಕಿದ್ದಂತೆ ಶ್ರೀರಾಮಕೃಷ್ಣರನ್ನು ನೋಡಲೇಬೇಕೆಂದು ಇಚ್ಛೆಯಾಯಿತು. ನನ್ನ ಸ್ನೇಹಿತರು ಮತ್ತು ನಾನು ಒಂದು ಬಾಡಿಗೆ ಗಾಡಿಯಲ್ಲಿ ದಕ್ಷಿಣೇಶ್ವರಕ್ಕೆ ಹೋದೆವು. ರಾತ್ರಿ ಬಹಳ ಹೊತ್ತಾಗಿತ್ತು. ಎಲ್ಲರೂ ಮಲಗಿದ್ದರು. ನಾವು ಮೂವರೂ ತೂರಾಡುತ್ತ ಶ್ರೀರಾಮಕೃಷ್ಣರ ಕೊಠಡಿಯನ್ನು ಪ್ರವೇಶಿಸಿದೆವು. ಶ್ರೀರಾಮಕೃಷ್ಣರು ನನ್ನ ಎರಡು ಕೈಗಳನ್ನೂ ಹಿಡಿದುಕೊಂಡು ಭಾವಾವೇಶದಿಂದ ನರ್ತಿಸುತ್ತ ಹಾಡಲು ಮೊದಲುಮಾಡಿದರು. ಆಗ ನನ್ನ ಮನಸ್ಸು ಹೀಗೆ ಆಲೋಚಿಸಿತು:

**"ಇಲ್ಲೊಬ್ಬರು ವ್ಯಕ್ತಿ ಇದ್ದಾರೆ. ಎಲ್ಲರನ್ನೂ, ದುಷ್ಟನಾದ ನನ್ನಂಥವನನ್ನೂ, ಯಾರ ಸ್ವಂತ ಕುಟುಂಬದವರೂ ಕೂಡ ಇಂತಹ ಸ್ಥಿತಿಯಲ್ಲಿರುವ ನನ್ನನ್ನು ಅಧಮನೆಂದು ತಿರಸ್ಕರಿಸುವರೊ ಅಂತಹ ನನ್ನನ್ನೂ, ಅವರ ಪ್ರೀತಿ ಆಲಂಗಿಸುವುದು. ಖಂಡಿತವಾಗಿಯೂ, ಧರ್ಮಿಷ್ಠರಾದವರಿಂದ ಗೌರವಿಸಲ್ಪಡುತ್ತಿರುವ ಈ ಪವಿತ್ರಾತ್ಮರು ಪತಿತಪಾವನರೂ ಹೌದು."**

(ಮುಂದುವರಿಯುವುದು)

# ಪುಷ್ಪ–೭ : ಸ್ವಾಮಿ ಅದ್ಭುತಾನಂದರು

ಶ್ರೀರಾಮಕೃಷ್ಣ ಶಿಷ್ಯೋದ್ಯಾನ ಡಾ. ಕೆ. ಅನಂತರಾಮು

ಸ್ವಾಮಿ ಅದ್ಭುತಾನಂದರ ಚರಿತ್ರೆಯೆಂದರೆ ಅದು ಓದುಬರಹವರಿಯದ ತಬ್ಬಲಿಯಾದ ಗೋಪಾಲಬಾಲಕನೊಬ್ಬನು ಪರಮಹಂಸರ ಪ್ರೇಮದ ಪುತ್ರನಾಗಿ ಸಂಸಾರವನ್ನು ಗೆದ್ದ ಕಥೆ. ಅದ್ಭುತಾನಂದ ಎಂಬುದು ಅವರಿಗೆ ಅನ್ವರ್ಥ ನಾಮವಲ್ಲದೆ ಬೇರೆಯಲ್ಲ. 'ಲಾಟು ಮಹಾರಾಜ್' ಎಂದು ಮಠದ ವಲಯದಲ್ಲಿ ಆತ್ಮೀಯರಾಗಿದ್ದ ಅವರು ಪರಮಹಂಸರ ಶಿಷ್ಯಕೋಟಿಯಲ್ಲಿ ಅವಿಸ್ಮರಣೀಯರು, ಪ್ರಾತಃಸ್ಮರಣೀಯರು.

### ರಾಮನೇ ಕಾಪಾಡಲಿ



ಬಿಹಾರ ರಾಜ್ಯದ ಛಾಪ್ರಾ ಜಿಲ್ಲೆಯ ಯಾವುದೋ ಗ್ರಾಮದಲ್ಲಿ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಅದ್ಭುತಾನಂದರು ಜನಿಸಿದರು. ರಖ್ತುರಾಮ ಎಂದು ಹೆಸರಿಟ್ಟಿದ್ದ ಕಡುಬಡವರಾದ ಆ ತಂದೆತಾಯಿಗಳು ಆ ಮಗುವಿಗೆ ಐದು ವರ್ಷ ತುಂಬುವುದರೊಳಗೇ ತೀರಿಹೋದರು. ರಖ್ತುರಾಮ ಎಂದರೆ ರಾಮನೇ ಕಾಪಾಡಲಿ ಎಂದರ್ಥ. 'ಕಾಪಾಡಲಿ' ಎಂಬ ಅರ್ಥವಿರುವ 'ರಕ್ಷತು' ಎಂಬ ಸಂಸ್ಕೃತಶಬ್ದದ ತದ್ಭವರೂಪವೇ ರಖ್ತು. ಅವರಿಗೆ ಆ ಹೆಸರು ಬೇರೆಯಲ್ಲ; ರಾಮ–ಕೃಷ್ಣರ ಸಮ್ಮಿಳನ ಅವತಾರಿಗಳಾದ ಶ್ರೀರಾಮಕೃಷ್ಣರು ಅವರನ್ನು ಕಾಪಾಡಿದ್ದು ಬೇರೆಯಲ್ಲ.

ತನಗೆ ಸಂತಾನವಿಲ್ಲದ ಚಿಕ್ಕಪ್ಪನೊಬ್ಬನು ತಬ್ಬಲಿ ರಖ್ತುರಾಮರನ್ನು ಅಕ್ಕರೆಯಿಂದ ಸಾಕಿದನು. ದನಕುರಿಗಳನ್ನು ಕಾಯುವ ಜೀವನ ಅವರ ದಾಯಿತು. ಗ್ರಾಮಜೀವನವು ಕಲಿಸಬಹುದಾದ ಭಾರತೀಯ ಸಂಸ್ಕೃತಿಯ ಪಾಠಗಳನ್ನೂ, ವ್ಯವಹಾರ ಕುಶಲತೆಯ ಪಾಠಗಳನ್ನೂ ಅವರು ಕಲಿತರು. ಶಾಲೆಯ ಬಂಧನ, ಮನೆಯ ಬಂಧನ ಮುಂತಾದ ಯಾವುದೇ ಬಂಧನಕ್ಕೆ ತುತ್ತಾಗದೆ ಅಲೆಮೋಹಿಯಾಗಿ ಆನಂದವಾಗಿರುತ್ತಿದ್ದರು. ಅಖಂಡವಾದ ಸಾಧನೆಯ ಬಲದಿಂದ ಬದುಕಿರುವಾಗಲೇ ಪಡೆದುಕೊಳ್ಳುವ ಮುಕ್ತಿಗೆ 'ಜೀವನ್ಮುಕ್ತಿ' ಎಂದು ಹೆಸರು. ಆದರೆ ಅದ್ಭುತಾನಂದರ ವಿಷಯದಲ್ಲಿ ಅದನ್ನು 'ಜೀವಲೋಕಕ್ಕೆ ಬರುತ್ತಿದ್ದಂತೆಯೇ ಪಡೆದುಕೊಂಡ ಮುಕ್ತಿ' ಎಂದು ಅರ್ಥೈಸಬೇಕಾಗಿದೆ.

ರಖ್ತುರಾಮರ ಚಿಕ್ಕಪ್ಪನು ತನ್ನ ದುಂದುಗಾರಿಕೆಯಿಂದ ಇದ್ದ ಒಂದಿಷ್ಟು ಆಸ್ತಿಯನ್ನೂ ಮಾರಿಕೊಂಡು, ರಖ್ತುರಾಮರನ್ನೂ ಕಟ್ಟಿಕೊಂಡು, ನೂರಾರು ಮೈಲಿಗಳನ್ನು ಕಾಲ್ನಡಿಗೆಯಲ್ಲಿಯೇ ಸವೆಸಿ, ಕೋಲ್ಕೊತಾ ಮಹಾನಗರವನ್ನು ಸೇರಿದನು. ಆತ ಹೇಗೋ ಹೊಟ್ಟೆ ಹೊರೆಯಲು ಉದ್ಯೋಗವೊಂದನ್ನು ಕಂಡುಕೊಂಡನು. ರಖ್ತುರಾಮರಾದರೋ ರಾಮಚಂದ್ರದತ್ತರೆಂಬ ವೈದ್ಯರಲ್ಲಿ ಮನೆಗೆಲಸದ ಆಳಾಗಿ ಸೇರಿದರು. ತಮ್ಮ ಪ್ರಾಮಾಣಿಕ ದುಡಿಮೆಯಿಂದ ಕೇವಲ ಆಳಾಗಿ ಉಳಿಯದೆ, ಮನೆಯ ಸದಸ್ಯರಲ್ಲಿ ಒಬ್ಬರಾಗಿಬಿಟ್ಟರು. ಮಹಾನಗರವು ಬೀಸುವ ಯಾವುದೇ ದುರ್ವ್ಯಸನದ ಜಾಲಗಳಿಗೆ ಬಲಿಯಾಗದೆ ರಖ್ತುರಾಮರು ನಿರ್ಮಲಾನಂದಮೂರ್ತಿಯಾಗಿ ಇದ್ದುಬಿಟ್ಟರು.

### ಹೂವು ಚೆಲ್ಲಿದ ಹಾದಿಯಲ್ಲಿ

'ರಾಮನೇ ಕಾಪಾಡಲಿ' ಎಂಬ ಹೆಸರನ್ನು ಹೊತ್ತ ರಖ್ತುರಾಮರ ಬದುಕನ್ನು ರಾಮನೇ ಕಟ್ಟಿಕೊಟ್ಟನು. ಅವರು ಸೇವಕರಾಗಿದ್ದ ಮನೆಯ ದಣಿ ರಾಮಚಂದ್ರದತ್ತರು ಪರಮಹಂಸರ ಪರಮಭಕ್ತರಾಗಿದ್ದುದು ವಿಧಿಯ ವಿಲಾಸವಲ್ಲದೆ ಬೇರೆಯಲ್ಲ. ರಾಮಚಂದ್ರದತ್ತರು ಆಗಾಗ ದಕ್ಷಿಣೇಶ್ವರಕ್ಕೆ ಹೋಗಿ ಪರಮಹಂಸರ ಸನ್ನಿಧಿಯಲ್ಲಿದ್ದು ಬರುತ್ತಿದ್ದರು. ಹಾಗೆಯೇ ಪರಮಹಂಸರ ಮಹೋನ್ನತಿಯನ್ನೂ, ಅವರ ದಿವ್ಯೋಪದೇಶಗಳನ್ನೂ ಮನೆಯವರ ಮುಂದೆ ಬಿತ್ತರಿಸಿ ಹಿಗ್ಗುತ್ತಿದ್ದರು. ರಖ್ತುರಾಮರೂ ಆ ಅದ್ಭುತಗಳನ್ನೆಲ್ಲ ಆಲಿಸುತ್ತಿದ್ದರು. 'ಹೇಗಾದರೂ ಮಾಡಿ ನಾನು ಆ ಮಹಾತ್ಮರನ್ನು ಕಾಣಲೇಬೇಕು' ಎಂದು ಉತ್ಕಂಠಿತರಾಗಿಬಿಟ್ಟರು.

೧೮೮೦ರ ಜನವರಿಯಲ್ಲಿ ರಾಮಚಂದ್ರದತ್ತರು ಒಮ್ಮೆ ದಕ್ಷಿಣೇಶ್ವರಕ್ಕೆ ಹೊರಟು ನಿಂತಾಗ, ರಖ್ತುರಾಮರು, "ಅಪ್ಪಾಜಿ, ನಾನೂ ಪರಮಹಂಸರ ದರ್ಶನ ಮಾಡಬೇಕು, ಕರೆದುಕೊಂಡು ಹೋಗುತ್ತೀರಾ" ಎಂದು ಬೇಡಿಕೊಂಡರು. ಸೇವಕನ

ಶ್ರದ್ಧೆಯಿಂದ ಕೌತುಕಗೊಂಡ ಅವರು 'ಆಗಲಿ ಬಾರಪ್ಪಾ' ಎಂದರು. ಪರಮಹಂಸರ ದರ್ಶನ ಪಡೆಯುತ್ತಿದ್ದಂತೆ ರಖ್ತುರಾಮರು ಪರಮಾನಂದದಿಂದ ಓಲಾಡತೊಡಗಿದರು. ಪರಮಹಂಸರಿಗೂ ಅಷ್ಟೇ ಆನಂದವಾಯಿತು. ರಾಮಚಂದ್ರರನ್ನು ಕುರಿತು "ಈ ಬಾಲಕನನ್ನು ನೀನು ಕರೆತಂದೆಯಾ, ನಿನಗೆಲ್ಲಿ ಸಿಕ್ಕಿದ? ಆಹಾ, ಪವಿತ್ರಾತ್ಮರ ಎಲ್ಲ ಲಕ್ಷಣಗಳೂ ಈತನಲ್ಲಿವೆ. ಆಗಾಗ ನನ್ನ ಬಳಿಗೆ ಕಳುಹಿಸುತ್ತಿರು" ಎಂದು ಮೊದಲನೋಟದಲ್ಲಿಯೇ ಪರಮಹಂಸರು ರಖ್ತುರಾಮರ ಭವಿಷ್ಯವನ್ನು ಬರೆದುಬಿಟ್ಟರು.

"ಇಲ್ಲಿ ಬಾ ಮಗುವೆ, ನನ್ನ ಹತ್ತಿರಕ್ಕೆ ಬಾ" ಎಂದು ಪರಮಹಂಸರು ಪ್ರೇಮಾರ್ದ್ರಭಾವದಿಂದ ರಖ್ತುರಾಮರ ತಲೆಯ ಮೇಲೆ ತಮ್ಮ ಅಮೃತಹಸ್ತವನ್ನಿಟ್ಟರು. ಆ ಸ್ವರ್ಗೀಯ ಸ್ಪರ್ಶದಿಂದ ರಖ್ತುರಾಮರು ಒಡನೆಯೇ ಭಾವಾವಿಷ್ಟರಾಗಿಬಿಟ್ಟರು; ಕಣ್ಣುಗಳಿಂದ ಜಲಧಾರೆ ಹರಿಯತೊಡಗಿತು, ತುಟಿಗಳು ಕಂಪಿಸತೊಡಗಿದುವು. ಒಂದು ಗಂಟೆಯ ಬಳಿಕ ಪರಮಹಂಸರು ಮತ್ತೊಮ್ಮೆ ಅವರ ತಲೆಯ ಮೇಲೆ ಕೈಯಿಟ್ಟು ಸಹಜಸ್ಥಿತಿಗೆ ಮರಳುವಂತೆ ಮಾಡಿದರು. ಆ ಮುಹೂರ್ತದಲ್ಲಿಯೇ ರಖ್ತುರಾಮರ ಹೃದಯವು 'ನಾನು ನಿಮ್ಮವನು' ಎಂದು ಹೇಳಿದರೆ, ಪರಮಹಂಸರ ಹೃದಯವು 'ನೀನು ನನ್ನವನು' ಎಂದು ಒಪ್ಪಿಕೊಂಡುಬಿಟ್ಟಿತು.

ಪರಮಹಂಸರ ಸನ್ನಿಧಿಗೆ ಆಗಾಗ ಬರುತ್ತ ಹೋಗುತ್ತ ರಖ್ತುರಾಮರಿಗೆ ರಾಮಚಂದ್ರದತ್ತರ ಮನೆಯ ಕೆಲಸವು ಬೇಡವಾಯಿತು. ಪರಮಹಂಸರ ಹತ್ತಿರ, "ನಾನು ನಿಮ್ಮ ಸೇವೆಮಾಡಿಕೊಂಡು ನಿಮ್ಮೊಡನೆಯೇ ಇರುತ್ತೇನೆ" ಎಂದು ಶಿಶುವಿನಂತೆ ರೋದಿಸತೊಡಗಿದರು. ಅದೊಂದು ಮನಕಲಕುವ ಸನ್ನಿವೇಶವಾಗಿತ್ತು. "ನಾನು ಪರಮಹಂಸರ ಸಾನ್ನಿಧ್ಯವಿಲ್ಲದೆ ಬದುಕಲಾರೆ' ಎಂಬ ಸ್ಥಿತಿಗೆ ರಖ್ತುರಾಮರು ತಲುಪಿಬಿಟ್ಟರು. ಪರಮಹಂಸರಿಗೆ ಅದು ಉಭಯಸಂಕಟವೇ ಆಯಿತು. ಕೊನೆಗೆ ರಾಮಚಂದ್ರದತ್ತರ ಅಪ್ಪಣೆ ಪಡೆದೇ ಪರಮಹಂಸರು ರಖ್ತುರಾಮರನ್ನು ತಮ್ಮ ಲೀಲಾಸಂಗಾತಿಯನ್ನಾಗಿ ಮಾಡಿಕೊಂಡರು. ಅಲ್ಲಿಗೆ ರಾಮಚಂದ್ರದತ್ತರ ಮನೆಯ ಅನ್ನನೀರಿನ ಋಣ ತೀರಿಯೇಹೋಯಿತು.

## ಸೇವೆಯೊಂದಿಗೆ ಸಾಧನೆ

ರಖ್ತುರಾಮರನ್ನು ಪರಮಹಂಸರು ವಾತ್ಸಲ್ಯದಿಂದ 'ಲೇಟೋ' ಎಂದು ಕರೆಯುತ್ತಿದ್ದರು. ಆಮೇಲೆ ಅವರು 'ಲಾಟು ಮಹಾರಾಜ್' ಎನಿಸಿದರು. ಮುಂದಕ್ಕೆ ವಿವೇಕಾನಂದರು ಅವರ ವಿವೇಕಪೂರ್ಣವಾದ ವಿಚಾರಧಾರೆಗೆ ಮನಸೋತು 'ಪ್ಲೇಟೋ' ಎಂದು ಕರೆಯುತ್ತಿದ್ದರು. "ಲೇಟೋ, ಸ್ವಲ್ಪ ಅಕ್ಷರಜ್ಞಾನ ಮಾಡಿಕೊಳ್ಳಪ್ಪಾ" ಎಂದು ಪರಮಹಂಸರು ಪ್ರಯತ್ನಿಸಿದರಾದರೂ ಬಿಹಾರಿ–ಬಂಗಾಳಿ ಉಚ್ಚಾರಣೆಗಳು ಕಲಬೆರಕೆಯಾಗಿ ಅದು ವಿಫಲವಾಯಿತು. ಅಕ್ಷರವೆಂದರೆ ನಾಶವಿಲ್ಲದ್ದು ಎಂದರ್ಥ. ಈ ಅಕ್ಷರಕ್ಕೆ ಪ್ರತಿಯಾಗಿ ಲಾಟು ಪರಮಾತ್ಮನೆಂಬ, ಸದ್ಗುರುವೆಂಬ ಅಕ್ಷರಕ್ಕೆ ತಮ್ಮನ್ನು ತೆತ್ತುಕೊಂಡುಬಿಟ್ಟರು.

ಪರಮಹಂಸರ ಒಂದೊಂದೇ ಉಪದೇಶವಾಕ್ಯವು, ಲಾಟು ತಮ್ಮನ್ನು ತಾವು ತಿದ್ದಿಕೊಳ್ಳಲು ಸಾಕಾಗುತ್ತಿತ್ತು. ಅವರು ಒಮ್ಮೆ ಸಣ್ಣವಿಷಯಕ್ಕೆ ಪರಮಹಂಸರ ಎದುರಿನಲ್ಲೇ ರಾಖಾಲರೊಡನೆ ಜಗಳವಾಡಿಬಿಟ್ಟರು. ಆಗ ಪರಮಹಂಸರು, "ಕೋಪವು ಮನುಷ್ಯನ ಭಕ್ತಿಪ್ರೇಮಗಳನ್ನು ಅಪಹರಿಸಿಬಿಡುತ್ತದೆಯಪ್ಪಾ" ಎಂದು ಹೇಳಿದ್ದಕ್ಕೆ ತಮ್ಮ ಸಿಟ್ಟುಸೆಡವುಗಳನ್ನು ನಿಯಂತ್ರಿಸಿಕೊಂಡರು. "ಹೆಚ್ಚು ನಿದ್ರೆ, ಹೆಚ್ಚು ತಿನ್ನುವುದು ಧ್ಯಾನಕ್ಕೆ ಮಾರಕ" ಎಂದು ಹೇಳಿದ್ದಕ್ಕೆ ನಿದ್ರೆಯನ್ನು ಗೆದ್ದು 'ಗುಡಾಕೇಶ'ರಾಗಿಬಿಟ್ಟರು, ಹೆಚ್ಚು ತಿನ್ನುವ ಚಪಲವನ್ನು ಬಿಟ್ಟು 'ಮಿತಾಹಾರಿ'ಯಾಗಿಬಿಟ್ಟರು. ಪರಮಹಂಸರು ಲಾಟುವಿನ ಮುಗ್ಧತೆಯನ್ನೂ, ಭಾವುಕತೆಯನ್ನೂ ಕಂಡು ಅವರನ್ನು ಭಕ್ತಿಮಾರ್ಗದಲ್ಲಿ ತೊಡಗಿಸಿದರು. ಸತ್ಸಂಗದ ಸಂದರ್ಭಗಳಲ್ಲಿ ಪರಮಹಂಸರ ಆದೇಶದಂತೆ ಲಾಟು ಭಾವಪರವಶರಾಗಿ ನರ್ತಿಸುತ್ತಿದ್ದರು.

೧೮೮೬ರ ವೇಳೆಗೆ ವೃದ್ಧಗೋಪಾಲ ಎಂಬ ಹಿರಿಯರೊಬ್ಬರು ಸಂನ್ಯಾಸಿಗಳಿಗೆ ಕೊಡಲೆಂದು ಕಾವಿಬಟ್ಟೆಗಳನ್ನೂ ಜಪಸರಗಳನ್ನೂ ತಂದು ಪರಮಹಂಸರ ಕೈಗಿತ್ತರು. ಆಗ ಪರಮಹಂಸರು, "ಸಂನ್ಯಾಸಿಗಳನ್ನು ಹುಡುಕುವುದೇಕಪ್ಪಾ, ಈ ಹುಡುಗರಿಗೇ ಕೊಡೋಣ, ಇವರಲ್ಲಿ ಒಬ್ಬೊಬ್ಬರೂ ಸಾವಿರ ಸಂನ್ಯಾಸಿಗಳಿಗೆ ಸರಿದೊರೆಯಾಗುತ್ತಾರೆ" ಎಂದು ಹೇಳಿ ತಾವೇ ವಿತರಣೆ ಮಾಡಿದರು. ಆಗಲೇ ಲಾಟುವಿಗೂ ಪರಮಹಂಸರ ದಿವ್ಯಹಸ್ತಗಳಿಂದಲೇ ಕಾವಿಬಟ್ಟೆ, ಜಪಮಾಲೆಗಳು ಲಭಿಸಿದುವು.

ಪರಮಹಂಸರು ಗಂಟಲುಬೇನೆಯಿಂದ ಕಾಶೀಪುರ ತೋಟದಮನೆಯನ್ನು ಆಶ್ರಯಿಸಿ ಹಾಸುಗೆ ಹಿಡಿದಾಗ ಲಾಟುವು ಶೌಚಗೃಹವನ್ನು ತೊಳೆದಿಡುವುದೇ ಮೊದಲ್ಗೊಂಡು ಸದ್ಗುರುವಿನ ಸೇವೆಯನ್ನು ಭಗವಂತನ ಸೇವೆಯೆಂದೇ ಬಗೆದು, ತ್ರಿಕರಣಶುದ್ಧಿಯಿಂದ ಮಾಡಿದರು. "ಈಗ ನಾನು ಭಗವಂತನಿಗೆ ಮಜ್ಜನಕ್ಕೆರೆಯುತ್ತಿದ್ದೇನೆ, ಈಗ ನಾನು ಭಗವಂತನಿಗೆ ವಸ್ತ್ರಧಾರಣೆ ಮಾಡಿಸುತ್ತಿದ್ದೇನೆ, ಈಗ ನಾನು ಭಗವಂತನಿಗೆ ಊಟ ಬಡಿಸುತ್ತಿದ್ದೇನೆ" ಎಂಬ ಅಭೇದಕಲ್ಪನೆಯನ್ನು ಸಿದ್ಧಿಸಿಕೊಂಡರು. ೧೮೮೬ರಲ್ಲಿ ಪರಮಹಂಸರು ಪರಂಧಾಮವನ್ನೈದಿದಾಗ, ಎರಡನೆಯ ಬಾರಿಗೆ ತಾನು ತಬ್ಬಲಿ

ಯಾದಂತೆ ದುಃಖಿಸಿದರು. ಶಾಸ್ತ್ರೀಯವಾಗಿ ಸನ್ಯಾಸವನ್ನು ಸ್ವೀಕರಿಸಿ, ವಿವೇಕಾನಂದರಿಂದ 'ಅದ್ಭುತಾನಂದ' ಎಂಬ ಆಶ್ರಮ ನಾಮವನ್ನು ಪಡೆದುಕೊಂಡರು. ವಿರಜಾಹೋಮ, ಪಿತೃಶ್ರಾದ್ಧ, ಆತ್ಮಶ್ರಾದ್ಧ ಮೊದಲಾದ ಕಲಾಪಗಳು ಆಗ ಜರುಗಿದುವು. ಪಿತೃದೇವತೆಗಳಿಗೆ ಪಿಂಡಪ್ರದಾನ ಮಾಡುವಾಗ ಕೆಲವರು ಮಂತ್ರಗಳನ್ನು ಹೇಳುತ್ತಿದ್ದರು. ಆದರೆ ಅದ್ಭುತಾನಂದರು ಮಾತ್ರ ತಮ್ಮದೇ ಭಾಷೆಯಲ್ಲಿ, "ಬನ್ನಿ ಅಪ್ಪ, ಇಲ್ಲಿ ಕುಳಿತುಕೊಳ್ಳಿ. ನಿಮಗಾಗಿ ಈ ಆಹಾರ ಪಾನೀಯಗಳಿವೆ, ಸ್ವೀಕರಿಸಿ ನಮ್ಮನ್ನು ಆಶೀರ್ವದಿಸಿ" ಎಂದು ಅತ್ಯಂತ ಸಹಜಭಾವದಿಂದ ಬೇಡಿದರು.

## ನಿರಾಭಾರಿ ಚರಮೂರ್ತಿ

ಅದ್ಭುತಾನಂದರು ವರಾಹನಗರದ ಮಠದಲ್ಲಿ ಗುರುಭಾಯಿಗಳೊಡನೆ ಇರುತ್ತಿದ್ದರಾದರೂ, ಅನ್ನಾಹಾರಗಳತ್ತ ಗಮನಕೊಡದೆ ಅವಧೂತರಂತೆ ಗಂಗಾತೀರದಲ್ಲೋ ಮತ್ತೆಲ್ಲೋ ಧ್ಯಾನಸ್ಥರಾಗಿ ಕಾಲಕಳೆದುಬಿಡುತ್ತಿದ್ದರು. ಪರಮಹಂಸರ ಭಕ್ತರಾದ ಉಪೇಂದ್ರಮುಖರ್ಜಿಯವರು ಪ್ರೀತಿಯಿಂದ ಆಹ್ವಾನಿಸಿದ್ದರಿಂದ, ಅವರು ನಡೆಸುತ್ತಿದ್ದ ಬಸುಮತಿ ಮುದ್ರಣಾಲಯದಲ್ಲಿ ಕೆಲವು ಕಾಲ ತಂಗಿದ್ದರು. ಅಲ್ಲಿನ ಸದ್ದುಗದ್ದಲ, ಕೆಲಸಗಾರರ ಒರಟುತನ– ಯಾವುದನ್ನೂ ಅವರು ಲೆಕ್ಕಿಸುತ್ತಿರಲಿಲ್ಲ. ಗಂಗಾತೀರದಲ್ಲೇ ಕಾಲಕಳೆದು ರಾತ್ರಿಯ ಹೊತ್ತಿಗೆ ಹಿಂದಿರುಗಿ ಬರುತ್ತಿದ್ದರು. ಆಮೇಲೆ ಭಕ್ತರಾದ ಬಲರಾಮಬಸು ತಮ್ಮ ಮನೆಗೆ ಬರಬೇಕೆಂದು ಕೋರಿದರು. 'ನನ್ನದು ಅಲಕ್‌ನಿರಂಜನ್ ಸ್ವಭಾವವಪ್ಪಾ, ನಿನಗೆ ಕಷ್ಟವಾಗುತ್ತದೆ' ಎಂದು ಹೇಳಿದರೂ ಅವರು ಇರಿಸಿಕೊಳ್ಳಲು ಹಿಂದೇಟು ಹಾಕಲಿಲ್ಲ.

ಪರಮಹಂಸರು ಈ ಮೊದಲೇ ಅವರಲ್ಲಿ ಕುಂಡಲಿನೀಶಕ್ತಿ ಜಾಗೃತವಾಗುವಂತೆ ಮಾಡಿದ್ದರು. ಶಿವಾಲಯದಲ್ಲೊಮ್ಮೆ ಅವರು ಧ್ಯಾನಾಸಕ್ತರಾಗಿದ್ದಾಗ ಶಿವನ ತೇಜದ ಬೆಳಕೊಂದು ಅವರ ಶರೀರವನ್ನು ಹೊಕ್ಕಿತು. ಅವರ ಭಕ್ತಿಗೊಲಿದು ಜಗನ್ಮಾತೆಯೂ ಅವರಿಗೆ ದರ್ಶನನೀಡಿ ಹರಸಿದಳು.

## ಅದ್ಭುತಚರಿತ ಅದ್ಭುತಾನಂದ

ಅದ್ಭುತಾನಂದರು ಶ್ರೀಮಾತೆ ಶಾರದಾದೇವಿಯವರ ಸೇವೆಯಲ್ಲಿಯೂ ನಿಸ್ಸೀಮರಾಗಿ, ಅವರ ಪ್ರೇಮದ ಕುವರರಾಗಿದ್ದರು. "ಈ ಹುಡುಗನ ಹೃದಯ ಅತ್ಯಂತ ನಿರ್ಮಲವಾಗಿದೆ. ನಿನಗೇನಾದರೂ ಸಹಾಯ ಬೇಕಾದರೆ ಅವನಿಗೆ ಹೇಳು" ಎಂದು ಪರಮಹಂಸರೇ ಶ್ರೀಮಾತೆಗೆ ಹೇಳಿದ್ದರು. ಹೀಗಾಗಿಯೇ ಶ್ರೀಮಾತೆ ತಮ್ಮ ಯಾತ್ರಾಕಾಲದಲ್ಲಿ ಅದ್ಭುತಾನಂದರನ್ನೂ ಜೊತೆಗೂಡಿಸಿಕೊಂಡಿದ್ದರು. ದೇವಘರ್, ವಾರಾಣಸಿ, ಅಯೋಧ್ಯಾ, ವೃಂದಾವನ ಮೊದಲಾದ ಕ್ಷೇತ್ರಗಳ ದರ್ಶನಲಾಭ ಅವರಿಗಾಯಿತು. ಅಲ್ಲೆಲ್ಲ ಅದ್ಭುತಾನಂದರು ಊಟತಿಂಡಿಗಳಿಗೆ ಸಕಾಲಕ್ಕೆ ಹಾಜರಾಗುತ್ತಿರಲಿಲ್ಲ. 'ಲಾಟುವಿನ ಸ್ವಭಾವವೇ ಹಾಗೆ' ಎಂಬುದನ್ನರಿತಿದ್ದ ಶ್ರೀಮಾತೆ ಅವರನ್ನು ನಿಯಂತ್ರಿಸುವ ಗೋಜಿಗೆ ಹೋಗಲಿಲ್ಲ.

ಪರಮಹಂಸರು ಬೋಧಿಸಿದ ಉಪದೇಶವಾಣಿಯನ್ನು ಹೃದಯಕ್ಕಿಳಿಸಿಕೊಳ್ಳುವ ವಿಷಯದಲ್ಲಿ ಅದ್ಭುತಾನಂದರು 'ಇವನೊಬ್ಬ ವಿಚಿತ್ರಪುರುಷ' ಎಂಬಂತೆ ಅದನ್ನು ಕೈಗೆತ್ತಿಕೊಳ್ಳುತ್ತಿದ್ದರು. ರಾಮಚಂದ್ರದತ್ತರ ಮನೆಯಿಂದ ದಕ್ಷಿಣೇಶ್ವರಕ್ಕೆ ಬರುವ ಹಾದಿಯಲ್ಲಿ ಅದ್ಭುತಾನಂದರು ಮದ್ಯದಂಗಡಿಯೊಂದನ್ನು ಹಾಯ್ದು ಬರುತ್ತಿದ್ದರು. "ಮದ್ಯದ ಹಿಡಿತದಿಂದ ದೂರವಿರಬೇಕು" ಎಂದು ಪರಮಹಂಸರು ಹೇಳಿದ್ದೇ ಕಾರಣವಾಗಿ ಅದ್ಭುತಾನಂದರು ಬಳಸುದಾರಿಯಾದರೂ ಲೆಕ್ಕಿಸದೆ ಮದ್ಯದಂಗಡಿಯ ದಾರಿಯನ್ನೇ ತೊರೆದು ಬೇರೊಂದು ಮಾರ್ಗವನ್ನು ಹಿಡಿದರು. ವಿವೇಕಾನಂದರೊಡನೆ ಕಾಶ್ಮೀರಕ್ಕೆ ಹೋಗಿದ್ದಾಗ ದೋಣಿಮನೆಯೊಂದನ್ನು ಬಾಡಿಗೆಗೆ ಪಡೆದರು. ಅದರ ಒಂದು ಮೂಲೆಯಲ್ಲಿ ಅಂಬಿಗನೂ ತನ್ನ ಮಡದಿಯೊಡನೆ ವಾಸಿಸುತ್ತಿದ್ದನು. ಉತ್ಸಾಹದಿಂದ ಅದ್ಭುತಾನಂದರು ಮೊದಲಿಗರಾಗಿ ಆ ದೋಣಿಯನ್ನೇರುತ್ತಿದ್ದಂತೆಯೇ ಅಲ್ಲಿ ಅಂಬಿಗನ ಹೆಂಡತಿಯನ್ನು ಕಂಡರು. "ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವವರು ಸ್ತ್ರೀಯರಿಂದ ದೂರವಿರಬೇಕು" ಎಂದು ಪರಮಹಂಸರು ಹೇಳಿದ ಮಾತು ಆಗ ನೆನಪಿಗೆ ಬಂದು, ಧಬಾರನೆ ಕೆಳಕ್ಕೆ ಧುಮ್ಮಿಕ್ಕಿಬಿಟ್ಟರು. ಆಮೇಲೆ ವಿವೇಕಾನಂದರು "ನಾನಿರುತ್ತೇನೆ, ಭಯವೇಕೆ?" ಎಂದು ಕಷ್ಟಪಟ್ಟು ಅವರನ್ನು ಮೇಲಕ್ಕೆ ಏರಿಸಿಕೊಂಡರು.

ಧ್ಯಾನದಲ್ಲಿ ಆಳವಾಗಿ ಮುಳುಗುವುದನ್ನು ಸ್ವಾಮಿ ಅದ್ಭುತಾನಂದರು ಅಪೂರ್ವ ರೀತಿಯಲ್ಲಿ ಸಾಧಿಸಿಕೊಂಡಿದ್ದರು. ಒಂದು ದಿನ ಗಂಗಾತೀರದಲ್ಲಿ ಧ್ಯಾನಮಾಡುತ್ತ ಕುಳಿತಿದ್ದಾಗ ನದಿಯೇ ಉಕ್ಕಿಬಂದು ಆವರಿಸಿಕೊಂಡರೂ ಅವರು ಎಚ್ಚರಗೊಳ್ಳಲಿಲ್ಲ. ಪರಮಹಂಸರೇ ಬೆಳಕಿನ ರೂಪದಲ್ಲಿ ತೋರಿಕೊಂಡು ಎಚ್ಚರಿಸಿದರು.

ಸಮಯೋಚಿತವಾಗಿ ಹಾಸ್ಯಲೇಪದ ಮಾತುಗಳನ್ನಾಡಿ ನಗೆಯುಕ್ಕಿಸುವ ಕಲೆಯಲ್ಲಿಯೂ ಅವರು ಜಾಣರಾಗಿದ್ದರು. ವರಾಹನಗರದ ಮಠದಲ್ಲಿ ಯುವಸಂನ್ಯಾಸಿಗಳು ಆಗತಾನೆ ಮುಕ್ತರಾಗಿದ್ದ ಪರಮಹಂಸರನ್ನು ನೆನೆಯುತ್ತ "ಅವರು ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು", "ಇಲ್ಲ, ಇಲ್ಲ, ಅವರು ತುಂಬಾ ಪ್ರೀತಿಸುತ್ತಿದ್ದುದು ನನ್ನನ್ನೇ" ಎಂದು ಪರಸ್ಪರ ಆನಂದ ಕಲಹದಲ್ಲಿ ತೊಡಗುತ್ತಿದ್ದರು. ಆಗ ಅದ್ಭುತಾನಂದರು, "ಏನಯ್ಯಾ, ನಿಮ್ಮ ಕಚ್ಚಾಟ ಮುಗಿಯುವುದಿಲ್ಲವೋ? ಪರಮಹಂಸರು